**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 36 ಗ್ರಾನೀಸ (2) 2015

2ನೇ ಮಹಡಿ, ಇ" ಬ್ಲಾಕ್
ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ,
ಕೆ.ಜಿ. ರಸ್ತೆ ಬೆಂಗಳೂರು-09.
ದಿನಾಂಕ:23.06.2015.

**Important / Urgent Please**

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**
1)ಮುಖ್ಯ ಇಂಜಿನಿಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
1ನೇ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ,
ಬೆಂಗಳೂರು-09.

2)ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

**ವಿಷಯ:** **2015-16ರ** ಸಾಲಿನ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಕ್ರಿಯಾ ಯೋಜನೆ ರೂಪಿಸುವ ಕುರಿತು.

**ಉಲ್ಲೇಖ:** ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:No, Q-14018/52(AAP)/2014-DWS(State)ದಿನಾಂಕ:07.01.2014ರ ಮೇಲೆ CE/PRED ದಿನಾಂಕ:17.03.2014ರಿಂದ ದಿ:20.03.2014ರವರೆಗೆ ನಡೆಸಿರುವ ಕ್ರಿಯಾ ಯೋಜನೆ ಸಭಾ ಸೂಚನೆಗಳು.

---

2015-16ರ ಸಾಲಿಗೆ ಚಾಲ್ತಿಯಲ್ಲಿರುವ NRDWP ಮಾರ್ಗಸೂಚಿಗಳನ್ವಯ ಸ್ಥಳೀಯ ವಾಸ್ತವಿಕ ಅಗತ್ಯತೆ ಆಧರಿಸಿ, ಗ್ರಾಮೀಣ ನೀರು ಸರಬರಾಜು ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು (Appendix-E) ಸಿದ್ಧಪಡಿಸಲು ಎಲ್ಲಾ ಜಿಲ್ಲಾ ಪಂಚಾಯತಿಗಳು ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಆದ್ಯತಾ ಕ್ರಮವಹಿಸಲು ಕೋರಿದೆ.

- 2014-15ರ ಸಾಲಿನ ಸಾಮಾನ್ಯ ಕ್ರಿಯಾ ಯೋಜನೆಯಡಿ ಹಾಗೂ ತುರ್ತು ಕ್ರಿಯಾ ಯೋಜನೆಯಡಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿದ್ದು, ಮುಂದುವರಿದಿರುವ ಎಲ್ಲಾ ಕಾಮಗಾರಿಗಳನ್ನು ಸಮರ್ಪಕವಾಗಿ ಅಳವಡಿಸಬೇಕು. ಇದರಲ್ಲಿ ಯಾವುದೇ ಕಾಮಗಾರಿ ಬಿಟ್ಟು ಹೋದಲ್ಲಿ 2015-16ರ ಸಾಲಿನಲ್ಲಿ ಬಿಲ್ ಪಾವತಿಗೆ ಅವಕಾಶವಿರುವುದಿಲ್ಲ ಹಾಗೂ ಅಂತಹ ಕಾಮಗಾರಿಗಳನ್ನು ಮುಂದೆ ಕ್ರಿಯಾ ಯೋಜನೆಯಲ್ಲಿ ಸೇರಿಸಲು ಅವಕಾಶ ಇರುವುದಿಲ್ಲ.
- 2014-15ರಲ್ಲಿ ಕೈಗೊಂಡಿರುವ ನೀರು ಸರಬರಾಜು ಪ್ರಮಾಣ ಮತ್ತು ನೀರಿನ ಗುಣಮಟ್ಟದ ಸಮೀಕ್ಷಾ ವರದಿಯ ದೃಢೀಕೃತ ಅಂಕಿಅಂಶಗಳನ್ನು (Approved YDU 2015-16) ಆಧರಿಸಿ, ಕೆಳಕಂಡ ಆದ್ಯತೆಯಲ್ಲಿ ಅರ್ಹ ಜನವಸತಿಗಳಿಗೆ ಮಾತ್ರ ಯೋಜನೆಗಳನ್ನು ಅಳವಡಿಸಬೇಕು.

(i) 0-25% Coverage ಮತ್ತು ಅಧಿಕ ರಾಸಾಯನಿಕ ಕಲುಷಿತ ಸಮಸ್ಯೆಗೊಳಗಾಗಿರುವ ಜನವಸತಿಗಳು.

...2

- ಅರ್ಹ ಜನವಸತಿಗಳಿಗೆ ಕ್ರಿಯಾ ಯೋಜನೆಯಡಿ ಕಾಮಗಾರಿಗಳನ್ನು ಅಳವಡಿಸುವಾಗ ಸದರಿ ಕಾಮಗಾರಿಯಿಂದ ಜನವಸತಿಯ ಪ್ರತಿಯೊಬ್ಬರಿಗೆ 55 ಲೀಟರ್ ನೀರು ಒದಗಿಸಲು ಸಮಗ್ರ ಯೋಜನೆ ರಚಿಸಿ, ಅಂದಾಜು ಮೊತ್ತವನ್ನು ಅಳವಡಿಸಬೇಕು.
- ಒಂದು ಜನವಸತಿಗೆ ಒಂದೇ ಸಮಗ್ರ ಯೋಜನೆಯನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಬೇಕು. (Multiple schemes should not be incorporated for a Habitation).
- ವಿವಿಧ ಉಪ ಘಟಕಗಳಡಿ ನೀಡಲಾದ ಅನುದಾನದ ಮಿತಿಯೊಳಗೆ ಯಾವುದೇ, ಉಲ್ಲಂಗನೆ ಇಲ್ಲದಂತೆ ಕ್ರಿಯಾ ಯೋಜನೆಯನ್ನು ಘಟಕವಾರು ತಯಾರಿಸಿ ಸಲ್ಲಿಸತಕ್ಕದ್ದು.
- ಹೊರಗುತ್ತಿಗೆ ಮುಖೇನ ನಿರ್ವಹಣೆ ಮಾಡಿಸಬೇಕಾದ MVS ಯೋಜನೆಗಳಿಗೆ ಸೂಕ್ತ O&M ವ್ಯವಸ್ಥೆ ಮಾಡಲು ಅಗತ್ಯವಿರುವ ಅನುದಾನವನ್ನು ಕ್ರಿಯಾ ಯೋಜನೆಯಡಿ ಅಳವಡಿಸಬೇಕು.
- Bulk Water Metering ಹಾಗೂ ಕೌಟುಂಬಿಕ ನೀರಿನ ಸಂಪರ್ಕ ಸಂಬಂಧ ಅಗತ್ಯವಿರುವ ಕಾಮಗಾರಿಗಳ ಬಾಬ್ತಿಗೆ ಸಂಪೂರ್ಣ ಅನುದಾನ ಒದಗಿಸಬೇಕು.
- ಎಲ್ಲಾ ಜನವಸತಿಗಳಲ್ಲಿರುವ ಸರ್ಕಾರಿ ಗ್ರಾಮೀಣ ಶಾಲೆಗಳು ಮತ್ತು ಅದರ ಶೌಚಾಲಯಗಳು ಮತ್ತು ಅಂಗನವಾಡಿ ಕೇಂದ್ರಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಗಾಗಿ ಅಗತ್ಯವಿರುವ ಕಾಮಗಾರಿಗಳನ್ನು ಅಳವಡಿಸಿ, ಸಂಪೂರ್ಣ ಅನುದಾನ ಒದಗಿಸಬೇಕು. ನೀರಿನ ವ್ಯವಸ್ಥೆ ಇಲ್ಲದಿರುವ ಶಾಲೆ ಮತ್ತು ಅಂಗನವಾಡಿಗಳ ಪಟ್ಟಿಯನ್ನು ಸಂಬಂಧ ಪಟ್ಟ ಇಲಾಖೆಯಿಂದ ದೃಢೀಕೃತ ಮಾಹಿತಿ ಪಡೆದು ಕ್ರಿಯಾ ಯೋಜನೆಯಲ್ಲಿ ಅಳವಡಿಸಬೇಕು.
- ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದಡಿ ನಿರ್ಮಲ ಗ್ರಾಮ ಪುರಸ್ಕಾರ ಪಡೆದಿರುವ ಜನವಸತಿಗಳಿಗೆ ಆದ್ಯತೆ ನೀಡಿ ಮನೆ ಸಂಪರ್ಕ ವ್ಯವಸ್ಥೆಗೆ ಪೂರಕವಾಗಿ ನೀರು ಪೂರೈಕೆ ಮಾಡಲು ಅಗತ್ಯವಿರುವ ಹೆಚ್ಚಳ ಅಭಿವೃದ್ಧಿ ಯೋಜನೆಗಳನ್ನು ಅಳವಡಿಸಬೇಕು.
- ಕೇಂದ್ರ ಪುರಸ್ಕೃತ ನಿರಂತರತೆ (Sustainability) ಕಾರ್ಯಕ್ರಮದಡಿ ಎಲ್ಲಾ ಮುಂದುವರಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಭೂ ವಿಜ್ಞಾನಿಗಳ ಸಲಹೆ ಮೇರೆಗೆ ವೈಜ್ಞಾನಿಕ ತಳಹದಿಯಲ್ಲಿ ಅಗತ್ಯವಿರುವ ಯೋಜನೆಗಳನ್ನು (ಹೈಡ್ರೋಫ್ರಾಕ್ಚರಿಂಗ್, V-wire technology ಅಳವಡಿಸುವುದೂ ಸೇರಿದಂತೆ) ಅನುದಾನ ಲಭ್ಯತೆ ಮಿತಿಯೊಳಗೆ ಮಾತ್ರ ಅಳವಡಿಸಬೇಕು.
- ಕ್ರಿಯಾ ಯೋಜನೆಯಡಿ ಉದ್ದೇಶಿತ ಕಾಮಗಾರಿಗಳನ್ನು ಅಳವಡಿಸುವಾಗ ಸದರಿ ಯೋಜನೆಗಳ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವ ಗಮನದಲ್ಲಿಟ್ಟುಕೊಳ್ಳಬೇಕು. ಅಂತೆಯೇ, 2015-16ರ ಸಾಲಿನಲ್ಲಿ ಅನುಮೋದನೆಯಾಗಬೇಕಾಗುವ / ಅನುಷ್ಠಾನಕ್ಕೆ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ MVS ಯೋಜನೆಗಳ ಸಂಬಂಧ, ವಾಸ್ತವಿಕವಾಗಿ ಅಗತ್ಯವಿರುವ ಅನುದಾನವನ್ನು ಕಾಯ್ದಿರಿಸಿಕೊಳ್ಳಬೇಕು.
- SCP/TSP ಹಾಗೂ Minority ಜನವಸತಿಗಳಿಗೆ NRDWP ಮಾರ್ಗಸೂಚಿಗಳನ್ವಯ ರಾಜ್ಯ ಮತ್ತು ಕೇಂದ್ರ ವಲಯಗಳಡಿ ನಿಗದಿಪಡಿಸಿರುವ ಮಾನದಂಡಗಳನ್ವಯ ಕ್ರಿಯಾ ಯೋಜನೆಯನ್ನು ಪ್ರತ್ಯೇಕವಾಗಿ ರೂಪಿಸಿ, **ಸಾಮಾನ್ಯ C&Q ಘಟಕದ SCP/TSP** ಶೀರ್ಷಿಕೆಯಡಿ ಅಳವಡಿಸಬೇಕು.
- 2014-15ರ ಕ್ರಿಯಾ ಯೋಜನೆಯನ್ನು ಗಮನದಲ್ಲಿಟುಕೊಂಡು ಅಗತ್ಯವಿರುವ HRD/IEC ಚಟುವಟಿಕೆಗಳು, MIS ಕಾರ್ಯಕ್ರಮ, R&D ಕಾರ್ಯಕ್ರಮ, Support Activity / WQMSP BRC/CRCಗಳು ಮತ್ತು PMC ಸಂಬಂಧದ ಹಾಗೂ ಪೈಲೆಟ್ ಯೋಜನೆಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ರೂಪಿಸಿ, ಜಿಲ್ಲಾವಾರು ಮತ್ತು ರಾಜ್ಯ ಮಟ್ಟದ ಅನುದಾನದ ಬೇಡಿಕೆಯನ್ನು IMISನಲ್ಲಿ ದಾಖಲಿಸಬೇಕು.
- 2014-15ನೇ ಸಾಲಿನ ಆಯವ್ಯಯ ಘೋಷಣೆಯಂತೆ ತೆಗೆದುಕೊಳ್ಳಲಾಗಿರುವ;
    i) SC/ST ಮನೆಗಳಿಗೆ ನಳ ಸಂಪರ್ಕ ಕಲ್ಪಿಸುವ ಕಾಮಗಾರಿಗಳು.
    ii) SC/ST ಕಾಲೋನಿಗಳಿಗೆ 1000 OHTಗಳ ಕಾಮಗಾರಿಗಳಿಗೆ ಪೂರ್ಣ ಅನುದಾನ ಒದಗಿಸಿಕೊಂಡು ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಕ್ರಮ ವಹಿಸಬೇಕು.
- ಅನುಮೋದಿತ ಶುದ್ಧೀಕರಣ ಘಟಕಗಳನ್ನು ಕ್ರಿಯಾ ಯೋಜನೆಯಲ್ಲಿ ತಪ್ಪದೇ ಅಲವಡಿಸುವುದು.

...3

ಮೇಲ್ಕಂಡ ಪ್ರಕ್ರಿಯೆಗಳನ್ನು ಅನುಸರಿಸಿ, ಸಿದ್ಧಪಡಿಸಿದ ಕ್ರಿಯಾ ಯೋಜನೆಯನ್ನು RDWSDಗಳು ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲು ರುಜುವಿನೊಂದಿಗೆ ದಿನಾಂಕ:30.06.2015ರೊಳಗೆ CE/RDWSD ಕಳುಹಿಸಬೇಕು. CE/RDWSDರವರು ಸದರಿ ಕ್ರಿಯಾ ಯೋಜನೆಯನ್ನು ಚಾಲ್ತಿಯಲ್ಲಿರುವ ಮಾರ್ಗಸೂಚಿಗಳು, ಸರ್ಕಾರದ ನಿರ್ದೇಶನಗಳು ಹಾಗೂ ಅನುದಾನ ಲಭ್ಯತೆ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸದರಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ, ಸರ್ಕಾರಕ್ಕೆ ದಿನಾಂಕ:30.06.2015ರೊಳಗಾಗಿ 30 ಜಿಲ್ಲಾ ಪಂಚಾಯತಿಗಳು Appendix-E ಹಾರ್ಡ್ ಮತ್ತು ಸಾಫ್ಟ್ ಕಾಪಿ ಕಳುಹಿಸಬೇಕು. ಹೀಗೆ ಸರ್ಕಾರಕ್ಕೆ ಕಳುಹಿಸುವ ಮುನ್ನ, ಕೇಂದ್ರ ಸರ್ಕಾರ ನಿಗದಿಪಡಿಸಿರುವ ಪ್ರಪತ್ರದಲ್ಲಿ ಸದರಿ ಮಾಹಿತಿ IMIS ನಲ್ಲಿ Upload ಆಗಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಸರ್ಕಾರದಿಂದ ಅನುಮೋದನೆ ದೊರೆತ ನಂತರ ಅಂತಿಮವಾಗಿ ಕೇಂದ್ರ ಸರ್ಕಾರದಿಂದ ಅನುಮೋದಿತ ಕ್ರಿಯಾ ಯೋಜನೆಗೆ Online ಮೂಲಕ ಒಪ್ಪಿಗೆ ಪಡೆಯಲು ಕ್ರಮವಹಿಸತಕ್ಕದ್ದೆಂದು ತಿಳಿಸಿದೆ. ಜಿಲ್ಲಾವಾರು ಅನುದಾನದ ಹಂಚಿಕೆಯನ್ನು ಅನುಬಂಧ – 1ರಲ್ಲಿ ಲಗತ್ತಿಸಿದೆ.

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
2. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತಿಗಳ ಮುಖ್ಯ ಯೋಜನಾ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
3. ರಾಜ್ಯದ ಎಲ್ಲಾ **(8)** ಅಧೀಕ್ಷಕ ಅಭಿಯಂತರರು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ವೃತ್ತ, ಕಛೇರಿಗಳು.
4. ಎಲ್ಲಾ **(30)** ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು. ಮತ್ತು
5. ರಾಜ್ಯದ ಎಲ್ಲಾ **(38)** ಕಾರ್ಯಪಾಲಕ ಇಂಜಿನಿಯರ್‌ಗಳು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಂಜಿನಿಯರಿಂಗ್ ವಿಭಾಗಗಳು,

